ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಆಡಳಿತ ಭವನ, ರಾಷ್ಟ್ರೀಯ ಹೆದ್ದಾರಿ – 167, ಮಂತ್ರಾಲಯ ರಸ್ತೆ, ಯಾರಗೆರಾ – 584133. ರಾಯಚೂರು.
registrarevrur@gmail.com
Examination Branch

ರಾವಿರಾ/ಪರೀಕ್ಷಾ/2023-24/579 ದಿ: 11.12.2023.

## ಸೂಚನೆ

ರಾಯಚೂರು ವಿಶ್ವವಿದ್ಯಾಲಯದ ಎಮ್.ಕಾಂ. ಸ್ನಾತಕೋತ್ತರ ವಿಭಾಗದ ನಾಲ್ಕನೆಯ ಸೆಮಿಸ್ಟರನ ವಿದ್ಯಾರ್ಥಿಗಳ ಯೋಜನ ವರದಿಯನ್ನು (ಪ್ರಾಜೆಕ್ಟ್ ರಿಪೋರ್ಟ್) ಪರಿಶೀಲಿಸಿ ಕೆಲವೊಂದು ಕಾಲೇಜುಗಳಲ್ಲಿ ಪರೀಕ್ಷೆಯನ್ನು ನಡೆಸಲಾಯಿತು. ಯೋಜನ ವರದಿಯ ಮೌಖಿಕ ಪರೀಕ್ಷಾವೇಳೆಯಲ್ಲಿ ಮತ್ತು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಯೋಜನ ವರದಿಯ ಪ್ರತಿಗಳನ್ನು ಪರಿಶೀಲಿಸಲಾಯಿತು. ಬಹಳಷ್ಟು ವಿದ್ಯಾರ್ಥಿಗಳ ಯೋಜನೆಯು ಸಂಪೂರ್ಣಗೊಂಡ ಪ್ರಮಾಣ ಪತ್ರಗಳನ್ನು, ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಲಾಂಛನವಿರುವ ಪ್ರಮಾಣ ಪತ್ರದಲ್ಲಿ ಕಾರ್ಯ ನಿರ್ವಹಿಸಿರುವಂತೆ/ ಸಂಪೂರ್ಣಗೊಂಡಂತೆ, ಸಂಸ್ಥೆಯವರ-ಅಂತರ್ಜಾಲದ-ಮಿಂಚಂಚೆಯ-ವಿಳಾಸ, ಸ್ಥಿರ/ ಸಂಚಾರಿ ದೂರವಾಣಿ ಸಂಖ್ಯೆಗಳನ್ನು ನಮೂದಿಸದೇ, ಕೇವಲ ಮುದ್ರೆ ಮತ್ತು ಸಹಿಯ ಮುದ್ರಣವಿರುವ, ಪ್ರಮಾಣ ಪತ್ರ ಲಗತ್ತಿಸಿರುತ್ತಾರೆ. ಇಂತಹ ಅನೇಕ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಗಿ ನಕಲಿ ಎಂದು ತಿಳಿದು ಬಂದಿರುತ್ತದೆ.

ಮುಂದುವರೆದು, ತಮ್ಮ ಕಾಲೇಜಿನ ಎಮ್.ಕಾಂ. ವಿಭಾಗದ ವಿದ್ಯಾರ್ಥಿಗಳು ಮಾರ್ಗದರ್ಶಕರ ಮೂಲಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಇಂತಹ ಪ್ರಸಕ್ತ ಯೋಜನ ವರದಿಗಳನ್ನು ಹಿಂಪಡೆಯಬೇಕಾಗುತ್ತದೆ. ಮತ್ತು ಪರೀಕ್ಷೆ ರದ್ದು ಪಡಿಸಿ ಮರು ಪರೀಕ್ಷೆ ನಡೆಸಬೇಕಾಗುತ್ತದೆ.

ಈ ಪತ್ರಕ್ಕೆ ಯಾವುದೇ ಸ್ಪಂದನೆ/ ಸ್ಪಷ್ಟ ಉತ್ತರ ಕನಿಷ್ಠ ಮೂರು ದಿನಗಳೊಳಗೆ ಪ್ರತಿಕ್ರಿಯೆಸದಿದ್ದರೆ ತಮ್ಮ ಕಾಲೇಜಿನ ಎಮ್.ಕಾಂ. ವಿಭಾಗದ ವಿದ್ಯಾರ್ಥಿಗಳ ಅಂಕಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಮತ್ತು ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಬರದೇ ಇದ್ದರೆ ಅದಕ್ಕೆ ತಾವೇ ಹೊಣೆಗಾರರಾಗಿರುತ್ತೀರಿ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಂತಹ ಶೈಕ್ಷಣಿಕ ಆಗಸ್ತಿನ ಕ್ರಮಕ್ಕೆ ವಿಶ್ವವಿದ್ಯಾಲಯವು ನಿಯಮಾನುಸಾರ ಕಾಲೇಜಿನ ಪ್ರಾಂಶುಪಾಲರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಧನ್ಯವಾದಗಳೊಂದಿಗೆ

ಕುಲಸಚಿವರು(ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು.

ಇವರಿಗೆ;

1. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ಎಮ್.ಕಾಂ. ಕಾಲೇಜುಗಳ ಪ್ರಾಂಶುಪಾಲರಿಗೆ.
2. ಕಚೇರಿ ಪ್ರತಿ.